INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -4, July-August, 2023,
PageNo,52-62
Peer -Reviewed, Refereed Journal

# ಶಾಸನಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆಯ ರಾಜಕೀಯ ಇತಿಹಾಸ ಕುರಿತ ಅಧ್ಯಯನ

ಡಾ.ದಿಲೀಪ್.ಎಸ್[1]

**ಹಾ**ಸನ ಜಿಲ್ಲೆಗೆ ದೇಶ ಮತ್ತು ಕರ್ನಾಟಕ ರಾಜ್ಯದಲ್ಲಿ ಒಂದು ಮಹತ್ವದ ಸ್ಥಾನವಿದೆ. ಈ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿಯು ವಿಶಿಷ್ಟವಾದದ್ದೇ ಆಗಿರುತ್ತದೆ. ಗುರುಗಳು ಹೊಯ್‌ಸಳ ಎಂದಿರುವುದು ಮುಂದೆ ಹೊಯ್ಸಳ ರಾಜ ವಂಶದ ಸೃಷ್ಠಿಗೆ ಕಾರಣವೇ ಆಗಿರುತ್ತದೆ. ಸಳನು ಜೈನ ಗುರುಗಳಾದ ಸುದತ್ತರ ಆಜ್ಞೆಯಿಂದ ಹುಲಿಯನ್ನು ಕೊಂದಿರುವ ಬಗೆಗೆ ಬೇಲೂರು ತಾಲೋಕಿನ ಕ್ರಿ.ಶ. 1160ರ ಶಾನಸ ಸಂಖ್ಯೆ–171, ಹೊಳೆನರಸೀಪುರದ ಕ್ರಿ.ಶ.1149ರ ಶಾಸನ ಸಂಖ್ಯೆ – 65, ಅರಸೀಕೆರೆ ತಾಲೋಕಿನ ಕ್ರಿ.ಶ. 1173ರ ಶಾಸನ ಸಂಖ್ಯೆ–71, ಇದೇ ತಾಲೋಕಿನ ಕ್ರಿ.ಶ.1255ರ ಶಾಸನ ಸಂಖ್ಯೆ –108ರಲ್ಲಿ, ಹಾಗೆಯೇ, ಬೀಲೂರು ತಾಲೋಕಿನಲ್ಲಿ ಕ್ರಿ.ಶ.1262ರ ಶಾಸನ–74ರಲ್ಲಿಯೂ ಸಳನು ಹುಲಿಯನ್ನು ಕೊಂದಿರುವುದನ್ನು ಮತ್ತು ಹೊಯ್ಸಳರ ದೊರೆ ವಿಷ್ಣುವರ್ಧನನ್ನು ಈ ಪ್ರದೇಶದಲ್ಲಿ ತನ್ನ ಆಡಳಿತವನ್ನು ನಡೆಸಿದ್ದನು ಎಂಬುದು ಈ ಶಾಸನಗಳಲ್ಲಿ ಉಲ್ಲೇಖಿತಗೊಂಡಿತ್ತದೆ.

ಮೌರ್ಯ ಸಾಮ್ರಾಜ್ಯದ ಸಂಸ್ಥಾಪಕನಾದ ಚಂದ್ರಗುಪ್ತ ಮೌರ್ಯ ತನ್ನ ಜೀವಿತದ ಅವಧಿಯಲ್ಲಿನ ಅಂತಿಮ ದಿನಗಳನ್ನು ಸರಿಸುಮಾರು ಕ್ರಿ.ಪೂ. 298ರಲ್ಲಿ ಬೇಲೂರು ತಾಲೋಕಿನ ಶ್ರವಣಬೆಳಗೊಳದಲ್ಲಿ ಕಳೆದಿದ್ದನು ಎಂಬುದು ತಿಳಿದುಬರುತ್ತದೆ. 11ನೇ ಶತಮಾನದಲ್ಲಿ ಚೋಳರಸರ ಅಧಿಪತಿಯಾಗಿದ್ದಂಥ ಬುಕ್ಕನಾಯಕನ ಆಡಳಿತದ ಬಗೆಗೆ ಕುದುರುಗುಂಡಿ ಗ್ರಾಮದಲ್ಲಿರುವ ಕ್ರಿ.ಶ.1140ರ ವೀರಗಲ್ಲಿನ ಶಿಲಾಶಾಸನದಿಂದಲೂ ಕೂಡ ಹಾಸನವು ಸುಮಾರು 12ನೇಯ ಶತಮಾನದ ಅಂತ್ಯದಲ್ಲಿ ಸ್ಥಾಪಿತವಾಯಿತೆಂದು ಹೇಳಲಾಗಿದೆ.ಕದಂಬರು ಈ ಪ್ರದೇಶವನ್ನು ಆಳ್ವಿಕೆ ಮಾಡಿರುವ ಬಗೆಗೆಬೇಲೂರು ತಾಲ್ಲೂಕಿನಲ್ಲಿ ದೊರೆತಿರುವ ಹಲ್ಮಿಡಿ ಶಾಸನವನ್ನು ಸರಿಸುಮಾರು ಕ್ರಿ.ಶ. 450ರಲ್ಲಿ ಕದಂಬರ ಅರಸ ಕಾಕುಸ್ಥವರ್ಮನಿಂದ ಪ್ರತಿಸ್ಥಾಪಿಸಲ್ಪಟ್ಟಿರುತ್ತದೆ. ಇದೇಬೇಲೂರು ತಾಲ್ಲೂಕಿನ ಹಳೇಬೀಡು ನೆಲೆ ವೀಡಿನಿಂದಲೇ ಕ್ರಿ.ಶ.475 ರಿಂದ 480ರವರೆಗೆ ಆಳಿದನು ಎಂದು ತಿಳಿದುಬರುತ್ತದೆ.ಬನವಾಸಿಯ ಕದಂಬರ ಆಳ್ವಿಕೆಯ ಅನಂತರ ಕ್ರಿ.ಶ.10–11ನೇ ಶತಮಾನದಲ್ಲಿ ಅವರ ಅನಂತರದ ಕದಂಬರು ಈ

[1]. ಸಹಾಯಕ ಪ್ರಾಧ್ಯಾಪಕರು,ಇತಿಹಾಸ ವಿಭಾಗ,ಕ.ರಾ.ಮು.ವಿ.ಮೈಸೂರು

ಹಾಸನ ಜಿಲ್ಲೆಯಲ್ಲಿ ರಾಜ್ಯಭಾರವನ್ನು ಮಾಡಿರುವುದಕ್ಕೆ ಹೊಳೆನರಸೀಪುರ ತಾಲೋಕಿನ ಶಾಸನ ಸಂಖ್ಯೆ–66, ಹಾಸನ ಮತ್ತು ಮುಜರಾಬಾದ್‌ನ ಶಾಸನ ಸಂಖ್ಯೆ–18ರ ಶಾಸನಗಳಲ್ಲಿ ಉಲ್ಲೇಖವಿರುತ್ತದೆ. ಇದೇ ಅಲ್ಲದೇ ಮತ್ತೆ ಹೊಳೆನರಸೀಪುರ ತಾಲ್ಲೂಕಿನಲ್ಲಿ ದೊರೆಯುವ ನಾಲ್ಕು ಶಾಸನಗಳು ಕದಂಬರ ಅರಸನಾಗಿದ್ದ ರಾಚಯ್ಯನು ಪ್ರಾಪಂಚಿಕ ಜೀವನವನ್ನು ತ್ಯಜಿಸಿ ತಪೋವೃತ್ತಿಯನ್ನು ಕೈಗೊಂಡಿದ್ದು ತಿಳಿದುಬರುತ್ತದೆ.

**ಗಂಗ ರಾಜವಂಶಸ್ಥರ ಆಡಳಿತದ ಬಗೆಗೆ** 17 ಶಾಸನಗಳು ದೊರೆತಿರುತ್ತವೆ. ಕೆರೆಗಾಲೂರು ಗ್ರಾಮದಲ್ಲಿ ದೊರೆತಿರುವಂಥ ಶಾಸನವು ಗಂಗರ ಅತ್ಯಂತ ಪ್ರಾಚೀನ ಶಾಸನವೆಂದು ಹೇಳಲಾಗುತ್ತದೆ.ಅರಕಲಗೂಡು ನಗರ ಪ್ರದೇಶದಲ್ಲಿ ದೊರಕಿರುವ ಶಾಸನವೊಂದು ಗಂಗರ ಇಮ್ಮಡಿ ರಾಚಮಲ್ಲ ಮತ್ತು ಈತನ ಸಹೋದರನ ಮಗನಾದಂಥ ಎರೆ ಗಂಗರ ಜಂಟಿಯ ಆಡಳಿತದ ಬಗೆಗೆ ದಾಖಲೀಕರಿಸಲಾಗಿದೆ.ಮುತ್ತಗ್ರಾಮದ ಶಾಸನವು ನೀತಿ ಮಾರ್ಗ ರಾಜಮಲ್ಲ ಪೆರ್ಮಾಡಿಯು ಕೊಮ್ಯಾಳೆಯಲ್ಲಿ ಸತ್ತಾಗ ಅಲ್ಲಿ ಅಗ್ನಿ ಪ್ರವೇಶವನ್ನು ಮಾಡಿದಂಥ ಬೆದನ್ತೆ ರಾಚೆಯನು ದೊರೆ ಎರೆಯಪ್ಪ ಪೆರ್ಮಾಡಿಯಿಂದ ಮೆಚ್ಚುಗೆಯನ್ನು ಕಲ್ನಾಡಾ ಪಡೆದನೆಂದು ಉಲ್ಲೇಖಿಸಿರುತ್ತದೆ.ಕರಗಡ ಗ್ರಾಮದಲ್ಲಿರುವ ಕ್ರಿ.ಶ. 974ರ ಶಾಸನವು ಇಮ್ಮಡಿ ಮಾರಸಿಂಹನ ಬಗೆಗೆ ದಾಖಲಿಸಿರುತ್ತದೆ.ಶ್ರವಣಬೆಳಗೊಳದಲ್ಲಿರುವ ಸುಮಾರು ಕ್ರಿ.ಶ. 400ರ ಶಾಸನವು ಗಂಗರ ಕಾಲದ ಅನೇಕ ವಿಶದಿ ಶಾಸನಗಳೇ ಆಗಿರುತ್ತವೆ.

ಕೊಂಗಾಳ್ವರು ಚೋಳರ ಅಧೀನತೆಯಲ್ಲಿ ಈ ನಾಡನ್ನು ಕ್ರಿ.ಶ.11 ಮತ್ತು 12ನೇ ಶತಮಾನದಲ್ಲಿ ಆಳಿದರು ಎಂಬುದು ತಿಳಿದುಬರುತ್ತದೆ.ಈ ಪ್ರದೇಶವನ್ನು ಕೊಂಗಲ್ನಾಡು 8000 ಎಂದು ಶಾನಗಳಲ್ಲಿ ಪ್ರಸ್ತುತಪಡಿಸಲಾಗಿದೆ.ಹಾಸನ ತಾಲೋಕಿನ ಕ್ರಿ.ಶ 1020 ರಿಂದ 1177ರವರೆಗಿನ ಶಾಸನಗಳು ಈ ಕೊಂಗಾಳ್ವರ ಅಧಿಕಾರವನ್ನು ಉಲೇಖಿಸಿರುವುದನ್ನು ಗುರುತಿಸಬಹುದು. ಮಂಜರಾಬಾದ್‌ನಲ್ಲಿ ಕ್ರಿ.ಶ. 1022ರ ಶಾಸನ ಸಂಖ್ಯೆ – 43, ಅರಸೀಕೆರೆ ತಾಲೋಕಿನ ಕ್ರಿ.ಶ. 1026ರ ಶಾಸನ ಸಂಖ್ಯೆ –76 ರಾಜೇಂದ್ರ ಕೊಂಗಾಳ್ವನ ಆಡಳಿತವನ್ನು ಉಲ್ಲೇಖಿಸಿರುತ್ತದೆ.ಗುಡ್ಡಹಿರಣ್ಯ ಗ್ರಾಮದ ಕ್ರಿ.ಶ. 1104ರಲ್ಲಿ ಎರಡು ಶಾಸನಗಳು ಸೋಮೇಶ್ವರ ದೇವಾಲಯದಲ್ಲಿದ್ದವು. ಚೆಂಗಾಳ್ವರ ಕೊನೆಯ ಹಾಗೂ ಪ್ರಸಿದ್ಧ ಅರಸರಾದಂಥ ಮಲ್ಲಿದೇವ ಹಾಗೂ ಆತನ ಮಗ ಹರಿಹರದೇವನು ಕೊಟ್ಟ ಭೂದಾನ ಹಾಗೂ ಗೋದಾನಗಳು ಕ್ರಿ.ಶ.1280, ಕ್ರಿ.ಶ. 1296 ಮತ್ತು 1300ರ ಈ ಮೂರು ಶಾಸನಗಳು ಇವರ ಆಡಳಿತದ ಕಾರ್ಯವೈಖರಿಯ ಬಗೆಗೆ ಉಲ್ಲೇಖಿತಗೊಂಡಿರುತ್ತವೆ.ಉದ್ದೂರಿನಲ್ಲಿರುವ ಕ್ರಿ.ಶ.1141ರ ವೀರಗಲ್ಲು ಸಂಖ್ಯೆ–17ರ ಶಾಸನವು ಈ ಭಾಗದಲ್ಲಿ ನಾಡಾಳ್ವರು ಆಳ್ವಿಕೆಯನ್ನು ನಡೆಸಿದ್ದರು ಎಂಬುದು ಇದರಲ್ಲಿ ಉಲ್ಲೇಖಿತವಾಗಿರುತ್ತದೆ.

ಹಾಸನ ಪ್ರದೇಶವನ್ನು ನಾಡಾಳ್ವರ ಅನಂತರ ಕ್ರಿ.ಶ.1346 ರಿಂದ 1485ರವರೆಗೂ ಸಂಗಮರು ಹಾಗೂ ಕ್ರಿ.ಶ.1485 ರಿಂದ 1505ರವರೆಗೆ ಸಾಳುವರು ಆಡಳಿತವನ್ನು ನಡೆಸಿರುವ ಬಗೆಗೆ ಕ್ರಿ.ಶ.1352ರಲ್ಲಿ ದೊರಕಿರುವ ಪ್ರಾಚೀನ ಶಾಸನವು ಇವರ ಆಡಳಿತವನ್ನು ಉಲ್ಲೇಖಿಸಿರುತ್ತದೆ. ಇಲ್ಲಿನ ಕೊನೆಯ ಶಾಸನವೂ ಕ್ರಿ.ಶ.1478ದಾಗಿರುತ್ತದೆ. ರುದ್ರಪಟ್ಟಣದಲ್ಲಿರುವ ಕ್ರಿ.ಶ.1217ರ ಶಾಸನವು ಇವರ ಆಡಳಿತದ ದುರ್ಮುಖಿ ಸಂವತ್ಸರ ಎಂದು ದಾಖಲಿಸಿರುತ್ತದೆ. ಹುಲಿಕೆರೆ ಗ್ರಾಮದ ಕ್ರಿ.ಶ.1378ರ ತಾಮ್ರ ಶಾಸನವು, ಘಟ್ಟದಹಳ್ಳಿಯಲ್ಲಿರುವ ಕ್ರಿ.ಶ.1385ರ ಶಾಸನ, ತವನಂದಿ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.1396ರಲ್ಲಿ ಶಾಸನ, ಹಂದಿನಕೆರೆ ಗ್ರಾಮದ ಕ್ರಿ.ಶ.1406ರ ತಾಮ್ರದ ಶಾಸನವು, ಗೋವಿನಹಳ್ಳಿಯ ಕ್ರಿ.ಶ.1445ರ ಶಾಸನವು ಸಂಗಮ ವಂಶಸ್ಥರ ಆಡಳಿತದ ಬಗೆಗಿನ ವಿವರಗಳನ್ನು ಉಲ್ಲೇಖಿಸಿರುವಂಥ ಶಾಸನಗಳೇ ಆಗಿರುತ್ತವೆ. ಘಟ್ಟದಹಳ್ಳಿಯಲ್ಲಿ ದೊರೆತಿರುವ ಕ್ರಿ.ಶ.1385ರ ಶಾಸನವು ಸಂಗಮೇಶ್ವರ ಎಂದೂ ಕೂಡ ದಾಖಲಿಸಿರುವುದನ್ನು ಗುರುತಿಸಬಹುದು. ತವನಂದಿ ಗ್ರಾಮದ ಕ್ರಿ.ಶ. 1396ರ ತಾಮ್ರ ಶಾಸನ ಹಾಗೂ ಹಂದಿನಕೆರೆ ಗ್ರಾಮದ ಕ್ರಿ.ಶ.1406ರ ಶಾಸನಗಳು,ಹೊನ್ನಾವರ ಗ್ರಾಮದ ಕ್ರಿ.ಶ.1371–72ರ ಶಾಸನ, ಶ್ರವಣಬೆಳಗೊಳದ ಕ್ರಿ.ಶ.1368ರ ಶಾಸನವು ಬುಕ್ಕಪ್ಪನು ವಾಸುದೇವನಂತಿದ್ದ ಎಂದು ಸ್ತುತಿಸುತ್ತದೆ. ಹುಲಿಕೆರೆಯ ಕ್ರಿ.ಶ.1378ರ ತಾಮ್ರ ಶಾಸನವು ಬುಕ್ಕಪ್ಪನ ಆಡಳಿತವನ್ನು ಉಲ್ಲೇಖಿಸಿರುತ್ತದೆ. ಹಾಗೆಯೇ, ಜನ್ನಯ್ಯನ ಬೊಕ್ಕಸದ ಸೇನೆಬೋವನಾಗಿದ್ದ ಅಲ್ಲಿನ ಕ್ರಿ.ಶ.1369ರ ಶಾಸನದಲ್ಲಿ ನರಸಿಂಹದೇವನ ಬರಹವಿದೆ.ಬೇಲೂರಿನಲ್ಲಿರುವ ಕ್ರಿ.ಶ.1300ರ ಶಾಸನವು ವಿಠಲ ದೇವಿಯನ್ನು ಉಲ್ಲೇಖಿಸಿರುತ್ತದೆ.ಒಂದನೇ ದೇವರಾಯನು ಪಟ್ಟಕ್ಕೆ ಬಂದಿರುವ ಬಗೆಗೆ ಹಂದಿನಕೆರೆಯ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.1406ರ ತಾಮ್ರದ ಶಾಸನದಿಂದ ತಿಳಿದುಬರುತ್ತದೆ.

ಸಾಳುವ ವಂಶದವರು ಎರಡನೇ ನರಸಿಂಹನ ಆಡಳಿತವನ್ನು ಜಂಬೂರು ಗ್ರಾಮದಲ್ಲಿ ಕ್ರಿ.ಶ. 1495ರ ಶಾಸನ ಹಾಗೂ ಹುಲಿಕೆರೆಯ ಶಾಸನದಲ್ಲಿ ಉಲ್ಲೇಖಿತಗೊಂಡಿರುತ್ತದೆ.ಚಾಲುಕ್ಯರು ಕ್ರಿ.ಶ.1073 ರಿಂದ 1174ರವರೆಗೆ ಆಳಿದ್ದಾರೆ.ಇದೇ ಚಾಲುಕ್ಯರು ಜೈನ ಆಚಾರ್ಯರನ್ನು ಅಪಾರವಾಗಿಯೇ ಗೌರವಿಸುತ್ತಿದ್ದರು ಎಂಬುದರ ಬಗೆಗೆ ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿರುವ ಹಲವು ಹತ್ತು ಶಾಸನಗಳು ದೃಢಪಡಿಸುತ್ತವೆ.

ಹೊಯ್ಸಳರ ಆಡಳಿತವನ್ನು ಕುರಿತಂತೆ ಬೇಲೂರು ತಾಲೋಕಿನಲ್ಲಿ ದೊರೆತಿರುವ ಕ್ರಿ.ಶ.1160ರ ಶಾಸನ ಸಂಖ್ಯೆ–171, ಕ್ರಿ.ಶ. 1261ರ ಶಾಸನ ಸಂಖ್ಯೆ–74, ಅರಸೀಕೆರೆ ತಾಲೋಕಿನ ದೊರೆಕಿರುವ ಕ್ರಿ.ಶ. 1173ರ ಶಾಸನ ಸಂಖ್ಯೆ–71ರಲ್ಲಿ ವಿವರವು ದಾಖಲಿಸಿರುತ್ತದೆ. ಬೇಲೂರು ತಾಲೋಕಿನಲ್ಲಿರು ಕ್ರಿ.ಶ.1261ರ ಶಾಸನ ಸಂಖ್ಯೆ – 74ರಲ್ಲಿ ಉಲ್ಲೇಖಿತಗೊಂಡಿರುತ್ತದೆ.ಹಾಸನ ಜಿಲ್ಲೆಯಲ್ಲಿ ರಾಜೇಂದ್ರ ಪೃಥ್ವಿ

ಕೊಂಹಾಳ್ವದೇವ ಆದಿತಾರದಿತ್ಯಾನ್ನು ಕ್ರಿ.ಶ.1066 ರಿಂದ 1100ರವರೆಗೆ ಈ ಪ್ರದೇಶದಲ್ಲಿ ತನ್ನ ಆಡಳಿತವನ್ನು ನಡೆಸಿದ್ದನು ಎಂಬುದನ್ನು ಅರಕಲಗೂಡಿನ ಶಾಸನವೊಂದು ಉಲ್ಲೇಖಿಸುತ್ತದೆ.ಬೇಲೂರು ತಾಲೋಕಿನ ಕ್ರಿ.ಶ.1117ರ ಶಾಸನ ಸಂಖ್ಯೆ 58ರಲ್ಲಿ ಹೊಯ್ಸಳರ ಬಿಟ್ಟದೇವನ ಸ್ವತಂತ್ರ ಆಡಳಿತವನ್ನು ಉಲ್ಲೇಖಿಸಿರುತ್ತದೆ.

ವಿನಯಾದಿತ್ಯ ಆಡಳಿತದ ಬಗೆಗೆ ಅರಸೀಕೆರೆ ತಾಲೋಕಿನ ಕ್ರಿ.ಶ. 1154 ಮತ್ತು 1159ರ ಶಾಸನ ಸಂಖ್ಯೆ–141 ಮತ್ತು 157ರಲ್ಲಿ, ಕ್ರಿ.ಶ.1131ರ ಶ್ರವಣಬೆಳಗೊಳದ ಶಾಸನವೊಂದು ತಿಳಿಸುತ್ತದೆ.ಶಿವ ದೇವಾಲಯವೊಂದನ್ನು ಇದೇ ವಿನಯಮಾದಿತ್ಯನು ಕ್ರಿ.ಶ. 1083ರಲ್ಲಿ ನಿರ್ಮಿಸಿರುವ ಬಗೆಗೆ ಅರಸೀಕರೆಯ ಶಾಸನ ಸಂಖ್ಯೆ–194ರಲ್ಲಿ ದಾಖಲೀಕರಿಸಲಾಗಿದೆ.ನಿಟ್ಟೂರು ಗ್ರಾಮದ ಕ್ರಿ.ಶ.1096ರ ಶಾಸನವೊಂದು ಮಹಾಮಂಡಳೇಶ್ವರ ಹೊಯ್ಸಳ ದೇವನ ರಾಜ್ಯ ಎಂದು ಹೆಸರಿಸಿದ್ದು ಇದು ವಿನಯಾದಿತ್ಯನ ಆಳ್ವಿಕೆಯ ಕಾಲವಧಿಗೆ ಹೊಂದಿಕೆಯಾಗುತ್ತದೆ.ಈತನನ್ನು ಬಿನಾಯಾಯತ ಮತ್ತು ವಿನಯಾತ ಎಂದೂ ಕೂಡ ಕರೆದಿರುವುದಕ್ಕೆ ಅರಸೀಕರೆಯ ಕ್ರಿ.ಶ.1098 ಮತ್ತು 1100ರ ಶಾಸನ ಸಂಖ್ಯೆ–179 ಮತ್ತು 102ರಲ್ಲಿ ಪ್ರಸ್ತುತ ಪಡಿಸಲಾಗಿರುತ್ತದೆ.

ಎರೆಯಂಗನ ಆಡಳಿತದ ಬಗೆಗೆ ಚನ್ನರಾಯಪಟ್ಟಣದ ಕ್ರಿ.ಶ. 1094ರ ಶಾಸನ ಸಂಖ್ಯೆ–485, 1ನೇ ಬಲ್ಲಾಳನು ಗುಡ್ಡದ ತೆರಣ್ಯ ಗ್ರಾಮದ ಕ್ರಿ.ಶ.1104ರ ಶಾಸನದಲ್ಲಿ, ದೊಡ್ಡಗದ್ದವಳ್ಳಿಯಲಿರುವ ಲಕ್ಷ್ಮೀದೇವಿ ದೇವಾಲಯದ ಪ್ರಾಕಾರದ ನೈರುತ್ಯ ದಿಕ್ಕಿನಲ್ಲಿ ಕಂಡುಬರುವ ಕ್ರಿ.ಶ.1113ರ ಶಾಸನವೊಂದು ವಿಷ್ಣುವರ್ಧನನ ಬಿರುದುಗಳನ್ನು,ಇದೇ ವಿಷ್ಣುವರ್ಧನನ ಸ್ವತಂತ್ರ ಆಡಳಿತವನ್ನು ಬೇಲೂರಿನ ಕ್ರಿ.ಶ. 1117ರ ಶಾಸನ ಸಂಖ್ಯೆ – 58ರಲ್ಲಿ ಉಲ್ಲೇಖಿತಗೊಂಡಿರುತ್ತದೆ. ಮತ್ತೇ ಕ್ರಿ.ಶ.1117ರಲ್ಲಿ ಬೇಲೂರಿನಲ್ಲಿ ಚನ್ನಕೇಶವ ದೇವಾಲಯ, ಕಪ್ಪೆ ಚನ್ನಕೇಶವ ದೇವಾಲಯ, ಕ್ರಿ.ಶ.1130ರಲ್ಲಿ ಮಾರ್ಲೆಯಲ್ಲಿ ಸಿದ್ದೇಶ್ವರ ದೇವಾಲಯ, ಪಾರ್ಶ್ವನಾಥ ಬಸಿದಿಯನ್ನು ಕ್ರಿ.ಶ.1133ರಲ್ಲಿ ಹಾಲೆಬಿದ್‌ನಲ್ಲಿ ನಿರ್ಮಾಣಮಾಡಿರುವುದು, ಬೇಲೂರಿನ ಕ್ರಿ.ಶ.1161ರಲ್ಲಿ ಶಾಸನ ಸಂಖ್ಯೆ–193ರಲ್ಲಿ ಹೊಯ್ಸಳರು ಕದಂಬರಿಂದ ಸೋತಾಗ ಬಂಕಾಪುರಕ್ಕೆ ರಾಜದಾನಿಯನ್ನು ವರ್ಗಾಯಿಸಿದ್ದರು ಎಂಬುದನ್ನು ಸೂಚಿಸುತ್ತದೆ.

ಹಾಸನ ಜಿಲ್ಲೆಯ ಕೇಂದ್ರ ಸ್ಥಾನವಾದ ನಗರ ಪ್ರದೇಶದಲ್ಲಿಯೇ ಕಂಡುಬಂದಿರುವ ಕ್ರಿ.ಶ.1117ರ ವೀರಗಲ್ಲು ಶಾಸನವೊಂದು ಬುವಗಾವುಂಡನ ಮಗ ಬಮ್ಮಗೊಂಡನು ಅರಸೀಕೆರೆಯಲ್ಲಿ ನಡೆದ ತುರುಗೋಳ್ ಕದನದಲ್ಲಿ ವೀರ ಮರಣವನ್ನು ಅಪ್ಪಿದರ ಬಗೆಗೆ ತಿಳಿಸುತ್ತದೆ. ಕಬ್ಬಿನಹಳ್ಳಿ ಗ್ರಾಮದಲ್ಲಿ ಕಂಡುಬರುವ ವೀರಗಲ್ಲು ಶಾಸನವೊಂದು ವಿಕ್ರಮಾದಿತ್ಯನ ಪರವಾಗಿ ಹೋರಾಡಿ ಮಸಣಯ ಎಂಬಾತನು ಮರಣ ಹೊಂದಿದುರ ಬಗೆಗೆ ತಿಳಿಸುತ್ತದೆ.ಶಾಂತಿಗ್ರಾಮದ ಕ್ರಿ.ಶ.1122ರ ಶಾಸನವೊಂದು

ವಿಷ್ಣುವರ್ಧನನ ಪಟ್ಟದರಸಿಯಾಗಿದ್ದ ಶಾಂತಲಾದೇವಿಯು ಅರಸನಿಂದ ಹಾರುವನಹಳ್ಳಿ, ಗೊಡೆಯನಹಳ್ಳಿ, ಗೌರಿಯಹಳ್ಳಿ, ಸಿರಿಯ ಬಡಗಿ ಕೊನಹಳ್ಳಿ, ಚಿಕ್ಕಹಂಡರಂಗಿ, ಕೋರವಂಗಲ, ಕರಡಿ ಈ ಗ್ರಾಮಗಳನ್ನು ಪಡೆದು 220 ಬ್ರಾಹ್ಮಣರಿಗೆ ದಾನ ನೀಡಿದ ಉಲ್ಲೇಖವನ್ನು ನೀಡುತ್ತದೆ

ಕೆಲವತ್ತಿ ಗ್ರಾಮದಲ್ಲಿ ದೊರೆತಿರುವ ಶಾಸನವೊಂದು ವಿಷ್ಣುವರ್ಧನನ ಸಹೋದರ ಉದಯಾದಿತ್ಯನು ಇದೇ ಗ್ರಾಮದಲ್ಲಿ ಮರಣ ಹೊಂದಿದ ವಿಷಯವನ್ನು ಉಲ್ಲೇಖಿಸುತ್ತದೆ. ದೊಡ್ಡಗದ್ದವಳ್ಳಿಯ ಪ್ರಾಕಾರದಲ್ಲಿ ಕಂಡುಬಂದಿರುವ ಕ್ರಿ.ಶ.1126–27ಕ್ಕೆ ಹೊಂದಿಕೆಯಾಗುವ ವೀರಗಲ್ಲು ಶಾಸನವೊಂದು ಬೊಪ್ಪದೇವನ ಕುದುರೆ ಕಾಳಗದಲ್ಲಿ ಸವಾರನು ಮರಣ ಹೊಂದಿದ ವಿಷಯ ತಿಳಿದುಬರುತ್ತದೆ. ವಿಶೇಷವಾಗಿ ಈ ಶಾಸನದಲ್ಲಿ ವಿಷ್ಣುವರ್ಧನನ ಹೆಸರಿನ ಜೊತೆಗೆ ಚಿಕ್ಕಬಿಟ್ಟಿದೇವ ಎಂಬ ಹೆಸರು ಉಲ್ಲೇಖವಾಗುತ್ತದೆ.

ಪೂಮಗಾಮೆ ಗ್ರಾಮದ 'ಕ್ರಿ.ಶ. 1139ರ ಶಾಸನವೊಂದು ಶಾಹಣಿ ಬಸವಯ್ಯನು ಪೂರ್ವಗಾವೆಯ ಕಾಳಿದೇವ ದೇವಾಲಯಕ್ಕೆ ಭೂಮಿಯನ್ನು ದಾನವಿತ್ತ ವಿಚಾರವನ್ನು ಹಾಗೂ ದಾನ ಪಡೆದ ವ್ಯಕ್ತಿಯ ಹೆಸರು ಕ್ರಿಯಾಶಕ್ತಿ ಪಂಡಿತ ಎಂಬುದನ್ನು ತಿಳಿಸುತ್ತದೆ. ಯೆಲೆಗುಂದ ಗ್ರಾಮದ ಕ್ರಿ.ಶ.1135ರ ಶಾಸನದಲ್ಲಿವಿಷ್ಣುವರ್ಧನನ ಅರಸಿ ಚಿಕ್ಕಶಾಂತಲೆ ಮತ್ತು ಈಕೆಯ ಮಗಳೂ ಮರಣ ಹೊಂದಿದ್ದರಿಂದ ಚಿಕ್ಕಶಾಂತಲೆಯ ತಾಯಿ ಹೆಗ್ಗಡತಿ ಜಕ್ಕಿಯಬ್ಬೆಯು ನಿರ್ಗುಂದ ನಾಡಿನ ಯೆಲೆಗುಂದದಲ್ಲಿ ಶಾಂತಲೇಶ್ವರ ಮತ್ತು ಬೊಪ್ಪೇಶ್ವರ ದೇವಾಲಯಗಳನ್ನು ನಿರ್ಮಿಸಿ ಪರೋಕ್ಷ ವಿನಯದ ರೂಪದಲ್ಲಿ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಇದೇ ಗ್ರಾಮದ ರಾಮೇದೇವರ ಹಳ್ಳದ ರಾಮೇಶ್ವರ ದೇವಾಲಯದ ಬಳಿ ಕಂಡು ಬಂದಿರುವ ಶಾಸನವೊಂದು ವಿಷ್ಣುವರ್ಧನನ ಅರಸಿ ಚಿಕ್ಕಶಾಂತಲೆಯು ಮರಣ ಹೊಂದಲಾಗಿ ಚಂಡಿಮುಂಡಿ ತೀರ್ಥದ ಮಹಾದೇವರಿಗೆ 3 ವಿತ್ತಿಗಳನ್ನು ದಾನ ನೀಡಿದ ವಿಚಾರವನ್ನು ಉಲ್ಲೇಖಿಸುತ್ತದೆ.

ಕುದುರುಗುಂಡಿ ಗ್ರಾಮದ ಕ್ರಿ.ಶ.1140ರ ವೀರಗಲ್ಲು ಶಾಸನವೊಂದು ವಿಷ್ಣುವರ್ಧನನು ಹಾನಗಲ್ಲಿನ ಕೋಟೆಯನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಚಟ್ಟಯಬಾಳುಗಿ ಎಂಬಾತನು ವೀರ ಮರಣವನ್ನಪ್ಪಿದರ ಬಗೆಗೆ ಉಲ್ಲೇಖಿಸುತ್ತದೆ. ವಿಷ್ಣುವರ್ಧನನ ಆಳ್ವಿಕೆಯನ್ನು ಮುಗಳೂರು ಗ್ರಾಮದಲ್ಲಿರುವ ಶಾಸನವೊಂದು ಮಾರಿಸೆಟ್ಟಿಯೆಂಬಾತನು ಜಿನಾಗಾರವೊಂದನ್ನು ಕಟ್ಟಿಸಿದ ವಿಷಯವನ್ನು ತಿಳಿಸುತ್ತದೆ. ಹೊನ್ನಾವರದ ಕ್ರಿ.ಶ. 1149ರ ಶಾಸನವೊಂದು ಕೋಣೆಯ ಶಂಕರ ದಂಡನಾಥನು ಕೇಶವ ದೇವಾಲಯವನ್ನು ನಿರ್ಮಿಸಿದನೆಂದು ತಿಳಿಸುತ್ತದೆ. ಬೈಲಹಳ್ಳಿ ಗ್ರಾಮದ ವೀರಗಲ್ಲು ಶಾಸನವೊಂದು ಮನುಮಹಾಮಂಡಳೇಶ್ವರ ಚೊಕ್ಕಬಿಟ್ಟಿದೇವನ ಕಾಳಗದೊಳು ದಂಡನಾಯಕ ಬೊಪ್ಪದೇವನು ಎಂದು ಹೆಸರಿಸಿದ್ದು, ಚೊಕ್ಕಬಿಟ್ಟಿದೇವನು ವಿಷ್ಣುವರ್ಧನನು ಬಹಳ ಪ್ರೀತಿಯಿಂದ ಕಾಣುತ್ತಿದ್ದ ಮರಿಯಾನೆ

ದಂಡನಾಯಕನ ಮಗ ಬಿಟ್ಟಿಯಣ್ಣ ಎಂಬುವನಿರಬಹುದು.ಬೊಪ್ಪದೇವನು ವಿಷ್ಣುವರ್ಧನನ ಮತ್ತೊಬ್ಬ ದಂಡನಾಯಕನಾಗಿರುವ ಬಗೆಗೆ ಉಲ್ಲೇಖವಿದೆ.

ದೊಡ್ಡಗದ್ದವಳ್ಳಿಯ ದೇವಾಲಯದ ಮಹಾದ್ವಾರದ ಬಳಿಯಿರುವ ಕ್ರಿ.ಶ.12ನೇ ಶತಮಾನದ ಶಾಸನವು ಶಿವಲೆಂಕ ದಾಸಯ್ಯನು ಮಹಾಲಕ್ಷ್ಮಿ ದೇವಾಲಯಕ್ಕೆ 10 ಹೊನ್ನುಗಳನ್ನು ದಾನ ನೀಡಿದುದರ ಬಗೆಗೆ ಉಲ್ಲೇಖಿಸುತ್ತದೆ.ಅನುಗವಳ್ಳಿಯ ಕೋದಂಡರಾಮ ದೇವಾಲಯದ ಬಳಿಯ ಶಾಸನವೊಂದು ವಿಷ್ಣುವರ್ಧನನ ಆಳ್ವಿಕೆಯ ವಿಗ್ರಹ ಅಥವಾ ದೇವಾಲಯವನ್ನು ಪ್ರತಿಷ್ಠೆ ಮಾಡಿದುದರ ಬಗೆಗೆ ತಿಳಿಸುತ್ತದೆ.ಇದೇ ದೇವಾಲಯದ ಪಶ್ಚಿಮದ ಗೋಡೆಯ ಮೇಲೆ ಕ್ರಿ.ಶ.14147ಕ್ಕೆ ಸಲ್ಲುವ ತಮಿಳು ಲಿಪಿಯ ಶಾಸನವೊಂದುಅನುಗವಳ್ಳಿಯ ಕೇಶವ ದೇವರಿಗಾಗಿ ಎರಡು ಖಂಡುಗ ಭೂಮಿಯನ್ನು ಖರೀದಿಸಿದುದರ ಬಗೆಗೆ ತಿಳಿಸುತ್ತದೆ.

ವಿಷ್ಣುವರ್ಧನನ ಅನಂತರ ಇವನ ಮಗ ಒಂದನೇ ನರಸಿಂಹನು ಹೊಯ್ಸಳ ರಾಜಮನೆತನದ ಗದ್ದುಗೆಯನ್ನು ಏರುತ್ತಾನೆ.ನಿಟ್ಟೂರು ಗ್ರಾಮದ ಸೋಮೇಶ್ವರ ದೇವಾಲಯದ ಬಳಿ ನಿಲ್ಲಿಸಿರುವ ಕ್ರಿ.ಶ. 1147ರ ವೀರಗಲ್ಲು ಶಾಸನವೊಂದು ಹೊಯ್ಸಳ ಅರಸರ ಬಿರುದುಗಳ ಜೊತೆಗೆ ನಾರಸಿಂಘದೇವನ ಆಳ್ವಿಕೆಯ ಕಾಲಘಟ್ಟದಲ್ಲಿ ಮಲೆಯಗಾವುಂಡನ ಮಗ ವರೆಯನು ತುರುಗೋಳ್ ಕಾಳಗದಲ್ಲಿ ಮರಣ ಹೊಂದಿದ ವಿಚಾರವನ್ನು ತಿಳಿಸುತ್ತದೆ. ಇದೇ ಶಾಸನದ ಪಕ್ಕದಲ್ಲಿರುವ ಮತ್ತೊಂದು ವೀರಗಲ್ಲು ಶಾಸನವು ಕ್ರಿ.ಶ.1145–46ರಲ್ಲಿ ಬಿಕ್ಕಿಸೆಟ್ಟಿಯ ಮಗ ಮರಣ ಹೊಂದಿದ ವಿಚಾರವನ್ನು ತಿಳಿಸುತ್ತದೆ.ಹೆರಗು ಗ್ರಾಮದ ಕ್ರಿ.ಶ.1155ರ ಶಾಸನವೊಂದು ಮಹಾಪ್ರಧಾನ ಮತ್ತು ಹಿರಿಯ ಹಡವಳ ಚಾವಿಮಯ್ಯನ ಪತ್ನಿ ಜಕ್ಕವ್ವೆಯು ಹೆರಗು ಗ್ರಾಮದಲ್ಲಿ ಚೆನ್ನಪಾರ್ಶ್ವನಾಥನಿಗೆ ಬಸದಿಯನ್ನು ನಿರ್ಮಿಸಿದನು.ಮುದುಗೆರೆ ಗ್ರಾಮದ ಕ್ರಿ.ಶ. 1156ರ ಶಾಸನವು ಒಂದನೇ ನರಸಿಂಹನ ಆಳ್ವಿಕೆಯಲ್ಲಿ ಪೆರ್ಗಡೆ ಎರೆಯಮನು ಮುದುಗೆರೆಯಲ್ಲಿ ತನ್ನ ಹೆಸರಿನಲ್ಲಿ ಎರಂಗೇಶ್ವರ ದೇವಾಲಯವನ್ನು ಕಟ್ಟಿಸಿ ಲಿಂಗ ಪ್ರತಿಷ್ಠಾಪನೆ ಮಾಡಿಸಿದ ವಿಷಯವನ್ನು ತಿಳಿಸುತ್ತದೆ. ಹೊನ್ನಾವರ ಗ್ರಾಮದ ಕ್ರಿ.ಶ.1158ರ ಶಾಸನವು ಒಂದನೇ ನರಸಿಂಹನ ಆಳ್ವಿಕೆಯಲ್ಲಿ ಕಂದಮಂಗಲದ ಬಮ್ಮಗಾವುಂಡ ಮತ್ತು ಬೆನವಗಾವುಂಡಿಯರ ಮಗನಾದ ಸುರಿಗೆಯ ಗಂಗಣ್ಣನು ಮಹಾಪ್ರಧಾನ ಶಂಕರದಣ್ಣಾಯಕನಿಗೆ ಸೇರಿದ ನೀರ್ಗುಂದನಾಡಿನ ಹೊನ್ನಪುರ (ಹೊನ್ನಾವರ)ದಲ್ಲಿ ಮೂಲಸ್ಥಾನ ಮಹಾದೇವ ದೇವಾಲಯದಲ್ಲಿ ದೇವರ ಮುಂದೆ ನಂದಿಯ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿಸಿದುದನ್ನು ತಿಳಿಸುತ್ತದೆ.ಹೆರಗು ಗ್ರಾಮದ ಕ್ರಿ.ಶ.1159ರ ಶಾಸನವೊಂದು ಹೊಯ್ಸಳ ಒಂದನೇ ನರಸಿಂಹನ ಆಳ್ವಿಕೆಯಲ್ಲಿ ಹೆಗಿನ ಸೋವನಾಥಿಮನಿಗೆ ಅರಸನ ಪರವಾಗಿ ದಾನ ನೀಡಿದಂತೆ ತಿಳಿದುಬಂದರೂ ಸಹ ಶಾಸನ ಅಪೂರ್ಣವಾಗಿದೆ. ಕೋರವಂಗಲದ ಗೋವಿಂದೇಶ್ವರ ದೇವಾಲಯದ ದಕ್ಷಿಣ ದಿಕ್ಕಿನಲ್ಲಿರುವ ಕ್ರಿ.ಶ. 1160ರ ಶಾಸನವು ಸೀಗೆನಾಡಿನ ಕೋರವಂಗಲ ಗ್ರಾಮದಲ್ಲಿ ಹೆಗ್ಗಡೆ ಮತ್ತು

ಶ್ರೀಕರಣ ಗೋವಿಂದಮಯ್ಯನು ಗೋವಿಂದೇಶ್ವರ ದೇವಾಲಯವನ್ನು ನಿರ್ಮಿಸಿ ದಾನ ನೀಡಿದ ವಿಚಾರಗಳನ್ನು ತಿಳಿಸುತ್ತದೆ.ಗೊರೂರಿನಲ್ಲಿರುವ ಕ್ರಿ.ಶ.1167ರ ಶಾಸನವು ಶತರುದ್ರಿಯ ಪುರವಾದ ಗೊರವೂರಿನಲ್ಲಿ ಸುರಿಗೆಯ ವಿಜಯಾದಿತ್ಯ ಹೆಗ್ಗಡೆಯು ತ್ರಿಕೂಟ ಲಿಂಗವನ್ನು ಪ್ರತಿಷ್ಠಾಪಿಸಿ 15 ಗದ್ಯಾಣಗಳನ್ನು ಮತ್ತು ಮಾವಿನಕೆರೆ ಗ್ರಾಮವನ್ನು ವಿಜಯಾದಿತ್ಯಪುರಕ್ಕೆ ಧಾರಾಪೂರ್ವಕವಾಗಿ ದಾನ ನೀಡಿದ ವಿಚಾರಗಳನ್ನು ತಿಳಿಸುತ್ತದೆ.ಹಾಗೆಯೇ, ಬೇಲೂರು ಮತ್ತು ಹೊಳೆನರಸೀಪುರ ತಾಲೋಕಿನ ಮಾವಿನಕೆರೆ ಗ್ರಾಮವನ್ನು ವಿಜಯಾದಿತ್ಯಪುರಕ್ಕೆ ದಾನ ನೀಡಿದ ವಿಚಾರವು ಪದೇ ಪದೇ ಪುನರಾವರ್ತಿತವಾಗುತ್ತದೆ. ಗೌಡಗೆರೆ ಗ್ರಾಮದ ಕ್ರಿ.ಶ.1170ರ ಒಂದು ಶಾಸನವು ನರಸಿಂಹನ ಆಳ್ವಿಕೆಯನ್ನುಜಕ್ಕೇನಹಳ್ಳಿಯ ಕ್ರಿ.ಶ. 1170–71ರ ಶಾಸನವು ಒಂದನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಮಹಾಪ್ರಧಾನ, ಹೆಗ್ಗಡೆ ಕಾಳಿಮಯ್ಯನು ಕಾಳೇಶ್ವರ ದೇವಾಲಯವನ್ನು ನಿರ್ಮಿಸಿರುವುದು, ಗೌಡಗೆರೆಯ ಕ್ರಿ.ಶ.1173ರ ವೀರಗಲ್ಲು ಶಾಸನವು, ಕಬ್ಬಿನಹಳ್ಳಿ ಗ್ರಾಮದ ಕ್ರಿ.ಶ.1173ರ ವೀರಗಲ್ಲು ಶಾಸನವು ಕೋರವಂಗಲದ ಕ್ರಿ.ಶ.12ನೇ ಶತಮಾನಕ್ಕೆ ಸಲ್ಲುವ ಒಂದು ಶಾಸನವುಒಂದನೇ ನರಸಿಂಹನ ಆಳ್ವಿಕೆಯನ್ನು ಪ್ರತಿನಿಧಿಸುತ್ತವೆ. ಶಾಂತಿಗ್ರಾಮದಲ್ಲಿರುವಂಥ ಶಾಸನವೊಂದು ವರದನರಸಿಂಹದೇವರ ನಂದಾದೀವಿಗೆಗೆ ವರ್ಷವೊಂದಕ್ಕೆ ಒಂದು ಗದ್ಯಾಣ ಮತ್ತು ಎರಡು ಹಣವನ್ನು ಧಾರಾಪೂರ್ವಕವಾಗಿ ದಾನ ನೀಡಿರುವುದನ್ನುಉಲ್ಲೇಖಿಸುತ್ತದೆ.

ಎರಡನೇ ಬಲ್ಲಾಳನ ಆಡಳಿತವನ್ನು ಹೊನ್ನಾವರದಲ್ಲಿರುವ ಕ್ರಿ.ಶ. 1173ರ ಶಾಸನವು, ಕಿತ್ತನಕೆರೆ ಗ್ರಾಮದ ಕ್ರಿ.ಶ.1173ರ ಶಾಸನವು, ಕೋರವಂಗಲದ ಕ್ರಿ.ಶ. 1173ರ ಶಾಸನವು, ಮರ್ಕುಲಿ ಗ್ರಾಮದ ಕ್ರಿ.ಶ. 1173ರ ಶಾಸನವು, ಹೆರಗು ಗ್ರಾಮದಕ್ರಿ.ಶ.1174ರ ಶಾಸನವು, ಜಕ್ಕೇನಹಳ್ಳಿ ಗ್ರಾಮದ ಕ್ರಿ.ಶ. 1176ರ ಶಾಸನವು ಕಬ್ಬಿನಹಳ್ಳಿ ಗ್ರಾಮದ 1178ರ ವೀರಗಲ್ಲು ಶಾಸನವು, ಹೊನ್ನಮ್ಮನಹಳ್ಳಿಯ ಕ್ರಿ.ಶ. 1178ರ ಶಾಸನವು, ಹೆರಗು ಗ್ರಾಮದ ಕ್ರಿ.ಶ. 1183ರ ಶಾಸನವು, ದೊಡ್ಡಗದ್ದವಳ್ಳಿ ಗ್ರಾಮದ ಕ್ರಿ.ಶ. 1194ರ ಶಾಸನವು ವೀರಬಲ್ಲಾಳನ ಆಳ್ವಿಕೆಯನ್ನು ಗುರುತಿಸುತ್ತವೆ.

ಕಿತ್ತನಕೆರೆಯ ಕ್ರಿ.ಶ. 1196ರ ಶಾಸನವು ಮತ್ತು ಕೋರವಂಗಲದ ಕ್ರಿ.ಶ.12ನೇ ಶತಮಾನದ ವೀರಗಲ್ಲು ಶಾಸನವು ಕೂಡ ಇದೇ ವೀರಬಲ್ಲಾಳನ ಆಳ್ವಿಕೆಯನ್ನು ಉಲ್ಲೇಖಿಸುತ್ತವೆ. ದೊಡ್ಡಗದ್ದವಳ್ಳಿಯ ಕ್ರಿ.ಶ. 1200ರ ಶಾಸನವು ವೀರಬಲ್ಲಾಳನು ತುಂಗಭದ್ರಾ ತೀರದಲ್ಲಿರುವಾಗಲೇ ಮಹಾಲಕ್ಷ್ಮೀದೇವಿ, ಮಹಾಕಾಳಿ ಮತ್ತು ಭೂತನಾಥ ದೇವರಿಗೆ ಜಾಗರವಳ್ಳಿ ಗ್ರಾಮವನ್ನು ತೆರಿಗೆ ರಹಿತವಾದಿ ದಾನ ನೀಡಿದ ವಿಚಾರವನ್ನು ಉಲ್ಲೇಖಿಸುತ್ತದೆ.

ಕುದುರೆಗುಂಡಿ ಗ್ರಾಮದ ಕ್ರಿ.ಶ. 1191ರ ವೀರಗಲ್ಲು ಶಾಸನವುಮತ್ತು ಶಾಂತಿಗ್ರಾಮದ ಕ್ರಿ.ಶ.1191ರ ಶಾಸನವು ವೀರಬಲ್ಲಾಳನು ಶಾಂತಿಗ್ರಾಮದ ವರದನರಸಿಂಹ ದೇವಾಲಯಕ್ಕೆ ತಾಮ್ರಶಾಸನವೊಂದನ್ನು

ನೀಡಿದನು. ಹೆರಗು ಗ್ರಾಮದ ಕ್ರಿ.ಶ.1217ರ ಶಾಸನವೊಂದು ವೀರಬಲ್ಲಾಳನ ಬಿರುದಾವಳಿಗಳನ್ನು ವರ್ಣಿಸಿರುತ್ತದೆ.

ದೊಡ್ಡಗದ್ದವಳ್ಳಿಯ ಕ್ರಿ.ಶ.1218ರ ಶಾಸನವು, ಹೆರಗು ಗ್ರಾಮದ ಕ್ರಿಶ.1218ರ ಶಾಸನವು ವೀರಬಲ್ಲಾಳನ ಬಿರುದುಗಳನ್ನು ವರ್ಣಿಸುವುದರ ಜೊತೆಗೆ ಈತನು ನಿಡುಗಲ್ಲು ಪೆದೇಶದ ಗಿರಿದುರ್ಗ ಸ್ಥಳದಲ್ಲಿ ನಿಕಟವರ್ತಿಯಾಗಿ ಆಳ್ವಿಕೆ ಮಾಡುತ್ತಿರುವಾಗ ಶ್ರೀಮತ್ಪಾವಾಸಿ, ತಂತ್ರಾಧಿಷ್ಠಾಯಕ, ಮಹಾಪಸಾಯತ, ಪರಮವಿಶ್ವಾಸಿ ಜಯಭಟ್ಟಯ್ಯ ನಾಯಕನು ಶ್ರೀ ಜೈತನಾರಾಯಣ ದೇವಾಲಯವನ್ನು ನಿರ್ಮಿಸಿ ಅರಸನಿಂದ ಆನೆಹಳ್ಳಿ ಎಂಬ ಗ್ರಾಮ ಮತ್ತು 40 ಗದ್ಯಾಣವನ್ನು ಪಡೆದು ಜೈತನಾರಾಯಣ ದೇವರಿಗೆ ದಾನ ನೀಡಿದನೆಂದು ಹಾಗೂ ಈ ಶಾಸನವನ್ನು ಕೆತ್ತಿದ ರೂವಾರಿಗಳು ಪೆಮ್ಮೋಜ ಮತ್ತು ಮಸಣೋಜರು ಎಂಬುದನ್ನು ತಿಳಿಸುತ್ತದೆ.

ಮಲ್ಲಿಗೆವಾಳು ಗ್ರಾಮದ ವೀರಗಲ್ಲು ಶಾಸನವೊಂದು ವೀರಬಲ್ಲಾಳನ ಬಿರುದುಗಳನ್ನು, ಇದೇ ಎರಡನೇ ಬಲ್ಲಾಳನ ಆಳ್ವಿಕೆಯು ಕ್ರಿ.ಶ.1220ರಲ್ಲಿ ಈತನ ಮರಣದ ಮೂಲಕ ಅಂತ್ಯವಾದಾಗ ಇದೇ ವರ್ಷ ಇವನ ಮಗ ಎರಡನೇ ನರಸಿಂಹನು ಹೊಯ್ಸಳ ರಾಜ್ಯದ ಚುಕ್ಕಾಣಿಯನ್ನು ಹಿಡಿದಿರುವುದನ್ನು ಕೂಡ ಉಲ್ಲೇಖಿಸಿರುತ್ತದೆ.

ನಿಟ್ಟೂರು ಗ್ರಾಮದ ಕ್ರಿ.ಶ.1221ರ ವೀರಗಲ್ಲು ಶಾಸನವು ನರಸಿಂಹನ ಆಳ್ವಿಕೆಯನ್ನು, ದೊಡ್ಡಗದ್ದವಳ್ಳಿಯ ಕ್ರಿ.ಶ.1222ರ ಶಾಸನವು ದಾನವನ್ನು ಮತ್ತು ಇದೇ ಗ್ರಾಮದ ಕ್ರಿ.ಶ.1227ರ ಶಾಸನವು ಮಹಾಮಂಡಳೇಶ್ವರ ನಾರಸಿಂಘ ದೇವರ ಆಳ್ವಿಕೆಯನ್ನು ಉಲ್ಲೇಖಿಸಿರುತ್ತದೆ.ಶಾಂತಿಗ್ರಾಮದ ಕ್ರಿ.ಶ.1227ರ ಶಾಸನವುನರಸಿಂಹನವರೆಗಿನ ಹೊಯ್ಸಳ ವಂಶಾವಳಿಯನ್ನು ಮತ್ತು ನರಸಿಂಹನ ಬಿರುದುಗಳನ್ನು ವಿಶೇಷ ಪದಪುಂಜಗಳಿಂದ ವರ್ಣಿಸಿರುತ್ತದೆ.ದುದ್ದ ಗ್ರಾಮದ ಕ್ರಿ.ಶ.1173ರ ವೀರಗಲ್ಲು ಶಾಸನವು ಎರಡನೇ ಬಲ್ಲಾಳನ ಆಳ್ವಿಕೆಯನ್ನು, ಮಲ್ಲಿಗೆವಾಳು ಗ್ರಾಮದ ಕ್ರಿ.ಶ.1234–35ರ ವೀರಗಲ್ಲು ಶಾಸನವುವೀರನಾರಸಿಂಗದೇವನ ಹೆಸರು ಮತ್ತು ಬಿರುದುಗಳನ್ನು ಉಲ್ಲೇಖಿಸಿರುತ್ತದೆ.ಹಿರೇಕಡಲೂರು ಗ್ರಾಮದ ಕ್ರಿ.ಶ. 13ನೇ ಶತಮಾನದ ತಾಮ್ರ ಶಾಸನವುಎರಡನೇ ನರಸಿಂಹನನ್ನು ವಿವಿಧ ವಿಶೇಷಣಗಳಿಂದ ವರ್ಣಿಸಿರುವುದು, ಕುದುರೆಗುಂಡಿ ಗ್ರಾಮದವೀರಗಲ್ಲು ಶಾಸನವು ವೀರನಾರಸಿಂಹನು ದೋರಸಮುದ್ರದಿಂದ ಆಳ್ವಿಕೆ ಮಾಡುತ್ತಿದ್ದುದನ್ನು ಉಲ್ಲೇಖಿಸಿದ್ದು, ಬೈಲಹಳ್ಳಿ ಗ್ರಾಮದ ಕ್ರಿ.ಶ.13ನೇ ಶತಮಾನದ ಕಾಲಘಟ್ಟಕ್ಕೆ ಹೊಂದಿಕೆಯಾಗುವ ವೀರಗಲ್ಲು ಶಾಸನವುಮಗರ ರಾಜ್ಯದ ನಿರ್ಮೂಲ ಮಾಡಿದ, ಚೋಳನ ರಾಜ್ಯ ಪ್ರತಿಪಾಳನ ಮಾಡಿದ ನಾರಸಿಂಹದೇವ ಎಂದು ಉಲ್ಲೇಖಿಸುವ ಮೂಲಕ ಎರಡನೇ ನರಸಿಂಹನ ಆಳ್ವಿಕೆಯನ್ನು ಪ್ರತಿನಿಧಿಸುತ್ತದೆ.

ಸೀಗೆಗ್ರಾಮದ ಕ್ರಿ.ಶ.1243–1244ರ ವೀರಗಲ್ಲು ಶಾಸನವು ಪ್ರತಾಪ ಚಕ್ರವರ್ತಿ ಹೊಯ್ಸಳ ಶ್ರೀಸೋಮೇಶ್ವರ ದೇವರ ಆಳ್ವಿಕೆಯನ್ನು, ಸಾಲಗಾಮೆ ಗ್ರಾಮದಕ್ರಿ.ಶ. 1258ರ ಶಾಸನವು ಪ್ರತಾಪ ಚಕ್ರವರ್ತಿ ಹೊಯ್ಸಳ ವೀರಸೋಮೇಶ್ವರನು ಕಣ್ಣಾನೂರಿನಲ್ಲಿ ಆಳ್ವಿಕೆ ಮಾಡುತ್ತಿದ್ದನೆಂಬ ಅಂಶವನ್ನು ಉಲ್ಲೇಖಿಸುತ್ತದೆ. ಗೌಡಗೆರೆ ಗ್ರಾಮದ ಕ್ರಿ.ಶ.1258ರ ವೀರಗಲ್ಲು ಶಾಸನವು ನರಸಿಂಹನು ದೋರಸಮುದ್ರದಿಂದ ಆಳ್ವಿಕೆ ನಡೆಸುತ್ತಿರುವ ಬಗೆಗೆ, ಕೆಲವತ್ತಿ ಗ್ರಾಮದ ಕ್ರಿ.ಶ.1266–67ರ ಒಂದು ಶಾಸನವು ವೀರನರಸಿಂಹನ ಆಳ್ವಿಕೆಯಲ್ಲಿಇದೇ ಅಲ್ಲಾಳ ಪೆರುಮಾಳ ದೇವಾಲಯಕ್ಕೆ ಕೆಲವು ಭೂಮಿಯನ್ನು ದಾನ ನೀಡಿದ ವಿಚಾರಗಳನ್ನು ಉಲ್ಲೇಖಿಸುತ್ತದೆ.ದುದ್ದ ಗ್ರಾಮದ ಕಲ್ಲೇಶ್ವರ ದೇವಾಲಯದ ಬಳಿಯಿರುವ ಕ್ರಿ.ಶ.1276ರ ವೀರಗಲ್ಲು ಶಾಸನವು, ಕುದುರೆಗುಂಡಿ ಗ್ರಾಮದ ಕ್ರಿ.ಶ.1283ರ ಶಾಸನವು, ಉಗನೆ ಗ್ರಾಮದವೀರಗಲ್ಲು ಶಾಸನವು, ಇದೇ ಗ್ರಾಮದವೀರಗಲ್ಲು ಶಾಸನವು, ಕ್ರಿ.ಶ.1291ರಲ್ಲಿ ನರಸಿಂಹನು ಮರಣ ಹೊಂದಲಾಗಿ ರಾಮನಾಥನ ಕಣ್ಣು ರಾಜ್ಯದ ಉತ್ತರಾಧಿಕಾರತ್ವದ ಕಡೆ ಹರಿದು ಕೆಲವು ವರ್ಷಗಳ ಕಾಲ ಮೂರನೇ ಬಲ್ಲಾಳನಿಗೂ ತೊಂದರೆ ನೀಡಿದನಾದರೂ ಇವೆಲ್ಲವನ್ನು ಮೆಟ್ಟಿನಿಂತು ಬಲ್ಲಾಳನು ಹೊಯ್ಸಳ ಸಿಂಹಾಸನವನ್ನು ಏರಿದನು.

ಹೊಯ್ಸಳ ರಾಜಮನೆತನದ ಇತಿಹಾಸದಲ್ಲೇ ವಿಷ್ಣುವರ್ಧನ, ಎರಡನೇ ಬಲ್ಲಾಳನ ತರುವಾಯ ಏಕಚಕ್ರಾಧಿಪತ್ಯದ ಅಡಿಯಲ್ಲಿ ಆಳ್ವಿಕೆ ನಡೆಸಿದ ಕೀರ್ತಿ ಮೂರನೇ ಬಲ್ಲಾಳನಿಗೆ ಸಲ್ಲುತ್ತದೆ.ಈತನ ಆಡಳಿತಕ್ಕೆ ಸಂಬಂಧಿಸಿದಂತೆ; ಒಟ್ಟು 08 ಶಾಸನಗಳಿವೆ. ದೊಡ್ಡಗದ್ದವಳ್ಳಿಯ ಕ್ರಿ.ಶ.1295ರ ಶಾಸನವು, ದುದ್ದ ಗ್ರಾಮದ ಕ್ರಿ.ಶ.1310ರ ವೀರಗಲ್ಲು ಶಾಸನವು, ಇದೇ ಗ್ರಾಮದ ಮತ್ತೊಂದು ವೀರಗಲ್ಲು ಶಾಸನವು, ಅವ್ವೇರಹಳ್ಳಿ ಗ್ರಾಮದ ಕ್ರಿ.ಶ.1314ರ ಶಾಸನವು, ಬನವಾಸೆ ಗ್ರಾಮದ ಕ್ರಿ.ಶ. 1314ರ ಶಾಸನವುಬ್ಯಾಡರಹಳ್ಳಿ ಗ್ರಾಮದ ಕ್ರಿ.ಶ. 1314ರ ಶಾಸನವು, ಅಮ್ಮಗೌಡನ ಹಳ್ಳಿ ಗ್ರಾಮದ ವೀರಗಲ್ಲು ಶಾಸನವು, ಉಡುವಾರೆ ಗ್ರಾಮದ ಕ್ರಿ.ಶ. 13–14ನೇ ಶತಮಾನಕ್ಕೆ ಹೊಂದಿಕೆಯಾಗುವ ಶಾಸನಗಳ ಉಲ್ಲೇಖಗಳಿಂದ ಕಂಡುಬರುತ್ತದೆ.

ವಿಜಯನಗರದ ಅರಸರು ಆಳ್ವಿಕೆ ನಡೆಸಿರುವಬಗೆಗೆ ಕ್ರಿ.ಶ.1404ರ ಸಂಖ್ಯೆ 446ರ ಶಾಸನವು ಇಮ್ಮಡಿ ಹರಿರಾಯನ ಮರಣವು 1404ನೇ ಆಗಸ್ಟ್ 30ರಂದು ಮರಣವನ್ನು, ದೇವರಾಯ ಮಹಾರಾಯರ ರಾಣಿ ಭೀಮಾದೇವಿನೆಂಬುಳು ಶಾಂತಿನಾಥ ಸ್ವಾಮಿಯನ್ನು ಮಡಿಸಿದಳು ಎಂದು ಕ್ರಿ.ಶ. 15ನೇ ಶತಮಾನದ ಸಂಖ್ಯೆ 445ರ ಶಾಸನವು, ಕ್ರಿ.ಶ.1446ನೇ ಆಗಸ್ಟ್ 24ರಂದು ಇಮ್ಮಡಿ ದೇರಾಯನು ಮರಣ ಹೊಂದಿರುವ ಬಗೆಗೆ ದಾಖಲೀಕರಿಸಲಾಗಿರುತ್ತದೆ.

ಮೈಸೂರು ಒಡೆಯರ್ ಅವರೂ ಕೂಡ ಹಾಸನ ಜಿಲ್ಲೆಯಲ್ಲಿ ಆಡಳಿತವನ್ನು ನಡೆಸಿದ್ದರು ಎಂಬುದಕ್ಕೆ ಚಾಮರಾಜ ಒಡೆಯರು ಶ್ರವಣಬೆಳಗೊಳಕ್ಕೆ ಬಂದಿರುವ ಬಗೆಗೆ ಕ್ರಿ.ಶ.1672ರ ಸಂಖ್ಯೆ 495ರ ಶಾಸನವು ಹಾಗೂ ಸಂಖ್ಯೆ 551ರ ಶಾಸನವು, ಶ್ರವಣಬೆಳಗೊಳದಲ್ಲಿರುವ ಕ್ರಿ.ಶ.1526ರ ಶಾಸನವು

ವಿಜಯನಗರ ಅರಸರು ಮತ್ತು ಅವರ ಅಧಿಕಾರಿಗಳು ಅಷ್ಟೇ ಅಲ್ಲದೆ ಅವರ ಮಾಂಡಲೀಕರು ಅನೇಕ ಜನಹಿತ ಕಾರ್ಯಗಳನ್ನು ನಡೆಸಿದ್ದಾರೆ.

ಶಿವಪ್ಪ ನಾಯಕನು ಹಾಸನ ಜಿಲ್ಲೆಯ ಬೇಲೂರು ಪ್ರದೇಶದಲ್ಲಿ ಆಡಳಿತ ನಡೆಸಿರುವ ಬಗೆಗೆ ಬೇಲೂರಿನ ಕ್ರಿ.ಶ.1659ರ ಶಾಸನ ಸಂಖ್ಯೆ – 80ರಲ್ಲಿ, ಇದೇ ತಾಲೋಕಿನ ಕ್ರಿ.ಶ.1660ರ ಶಾಸನ ಸಂಖ್ಯೆ –81ರಲ್ಲಿ, ಬೇಲೂರು ತಾಲ್ಲೂಕಿನ ಕ್ರಿ.ಶ.1660ರ ಶಾಸನವು, ಬೇಲೂರಿನಲ್ಲಿರುವ ಕ್ರಿ.ಶ.1736ರ ಶಾಸನ ಸಂಖ್ಯೆ–64ರ ಪ್ರಕಾರ; ಕೇಶವ ದೇವಾಲಯವನ್ನು ವೆಂಟಾದ್ರಿ ನಾಯಕನು (1708–1751)ರ ನಿರ್ಮಿಸಿರುವ ಬಗೆಗೆ ಉಲ್ಲೇಖವಿರುತ್ತದೆ.ಹೊಯ್ಸಳರ ಅಧಿನದಲ್ಲಿದ್ದಂಥ ನರಸಿಂಹನಾಯಕ ಕ್ರಿ.ಶ.1168ರಲ್ಲಿ ಚನ್ನರಾಯಪಟ್ಟಣ ಹಾಗೂ ಹೊಳೆನರಸೀಪುರಗಳ ಮುಖ್ಯಸ್ಥ ಎಂಬುದನ್ನು ಹೊಳೆನರಸೀಪುರ ತಾಲೋಕಿನ ಕ್ರಿ.ಶ. 1580ರ ಶಾಸನ ಸಂಖ್ಯೆ–125ರಲ್ಲಿ ಉಲ್ಲೇಖಿತಗೊಂಡಿರುತ್ತದೆ. ಹಾಗೆಯೇ, ಇದೇ ತಾಲೋಕಿನ ಶಾಸನ ಸಂಖ್ಯೆ–158, 125, 21, 22 ಮತ್ತು 62 ಇವುಗಳು ವೆಂಕಟಾದ್ರಿ ನಾಯಕನಿಗೆ ಹೊಯ್ಸಳರು ಭೂಮಿಯನ್ನು ದಾನವಾಗಿ ನೀಡಿದ್ದರು ಎಂಬುದು ತಿಳಿದುಬರುತ್ತದೆ.ನರಸಿಂಹ ನಾಯಕನು ಆಳಿರುವ ಬಗೆಗೆ ನಿಡೋನಿ ಗ್ರಾಮ ನರಸಿಂಹ ದೇವಾಲಯದಲ್ಲಿ ದೊರೆತಿರುವ ಕ್ರಿ.ಶ.1591ರ ಶಾಸನ ಸಂಖ್ಯೆ–127ರಲ್ಲಿ ಉಲ್ಲೇಖಿತಗೊಂಡಿರುತ್ತದೆ.ಹಾಸನ ಪ್ರದೇಶವನ್ನು ಲಕ್ಷ್ಮಪ್ಪನಾಯಕನ ಉಸ್ತುವಾರಿಯಲ್ಲಿತ್ತು ಎಂಬುದಕ್ಕೆ ಕ್ರಿ.ಶ. 1606ರಲ್ಲಿನ ಎರಡು ಶಾಸನಗಳು ಹೊಳೆನರಸೀಪುರ ತಾಲೋಕಿನ ಶಾಸನ ಸಂಖ್ಯೆ – 31 ಮತ್ತು 75ರಲ್ಲಿ, ಮತ್ತೇ ಕ್ರಿ.ಶ. 1614ರ ಶಾಸನ ಸಂಖ್ಯೆ–56 ಮತ್ತು 114 ದಾಖಲಿಸಿರುತ್ತವೆ. ಹಾಗೆಯೇ, ಕ್ರಿ.ಶ.1629ರ ಶಾಸನ ಸಂಖ್ಯೆ – 147ರಲ್ಲಿಯೂ ಇದರ ಬಗೆಗೆ ಮಾಹಿತಿಯೂ ದೊರೆಯುತ್ತದೆ. ಮತ್ತೇ, ಹೊಳೆನರಸೀಪುರ ತಾಲೋಕಿನ ಮಾವಿನಕೆರೆಯ ತ್ರಿರುವೆಂಗನಾಥ ದೇವಾಲಯದಲ್ಲಿ ದೊರೆತಿರುವ ಕ್ರಿ.ಶ. 1629ರ ಶಾಸನ ಸಂಖ್ಯೆ–124ರಲ್ಲಿ ಉಲ್ಲೇಖಗೊಂಡಿರುವಂತೆ ಈ ಲಕ್ಷ್ಮಪ್ಪನಾಯಕನ ಹಿರಿಯ ಮಗನಾದ ರಂಗಪ್ಪನಾಯಕನು ನಿರ್ಮಿಸಿದ್ದನು ಎಂಬುದನ್ನು ಸಂಬೋಧಿಸುತ್ತದೆ.ಮೈಸೂರು ಒಡೆಯರ ಆಡಳಿತಕ್ಕೆ ಒಳಗಾಗಿತ್ತು ಎಂಬುದಕ್ಕೆ ಹೊಳೆನರಸೀಪುರದ ಕ್ರಿ.ಶ.1658ರ ಶಾಸನ ಸಂಖ್ಯೆ–38, ಹಾಸನದ ಶಾಸನ ಸಂಖ್ಯೆ–25, ಹಾಗೆಯೇ, ಹೊಳೆನರಸೀಪುರದ ಕ್ರಿ.ಶ.1659ರ ಶಾಸನ ಸಂಖ್ಯೆ–36, 54 ಮತ್ತು 74 ಹಾಗೂ ಅರಕಲಗೂಡಿನ ಕ್ರಿ.ಶ.1665ರ ಶಾಸನ ಸಂಖ್ಯೆ–106ರಲ್ಲಿ ಉಲ್ಲೇಖಿತಗೊಂಡಿರುತ್ತದೆ.

ಹೀಗೆ, ಹಾಸನ ಜಿಲ್ಲೆಯಲ್ಲಿ ದೊರಕಿರುವ ಶಾಸನಗಳ ಮೂಲಕ ಈ ಪ್ರದೇಶದ ರಾಜಕೀಯ ಇತಿಹಾಸವನ್ನು ಸಾದರಪಡಿಸಲಾಗಿರುತ್ತದೆ ಎಂದು ಹೇಳಬಹುದು.

## ಗ್ರಂಥಸೂಚಿ


1. ಎಪಿಗ್ರಾಫಿಯ ಕರ್ನಾಟಿಕ, ಹಾಸನ ಜಿಲ್ಲೆ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1975
2. ಹಾಸನ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 1988
3. ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುರಾತತ್ವ ಇಲಾಖೆ, ಮೈಸೂರು, 2010
4. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150), ಬೆಂಗಳೂರು, 2014
5. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2009
6. ಶಾಸನ ಸಂಗ್ರಹ (ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2013